


ಅಮೆರಿಕದ ಒಹಾಯ್ ನಗರದ ಬಾರ್ಟ್ಸ್ ಬುಕ್ಸ್ ಫುಟ್‌ಪಾತ್‌ನಲ್ಲಿನ ಪುಸ್ತಕದ ಕಪಾಟುಗಳು

# ಪುಸ್ತಕ ದಾಸೋಹದ ಹಲವು ರೂಪ

**ಏಪ್ರಿಲ್ 23 'ವಿಶ್ವ ಪುಸ್ತಕ ದಿನ'**

**ಜೆ. ಬಾಲಕೃಷ್ಣ**

ಕೆಲವು ತಿಂಗಳುಗಳ ಹಿಂದೆ ಊಟಿಯ ಗ್ರಂಥಾಲಯವೊಂದರಲ್ಲಿ ಅಮೂಲ್ಯ ಗ್ರಂಥವೊಂದು ಕಳ್ಳತನವಾಗಿದ್ದು, ಬೆಂಗಳೂರಿನ ಆ ಕಳ್ಳನನ್ನು ಹುಡುಕಿ ಬಂಧಿಸಿರುವ ಸುದ್ದಿ ದಿನಪತ್ರಿಕೆಗಳಲ್ಲಿ ಓದಿದಾಗ ಅಚ್ಚರಿಯಾಯಿತು. ಪುಸ್ತಕ ಕಳ್ಳತನ ಮಾಡುವವನು ಸಾಮಾನ್ಯವಾಗಿ ಓದಿನಲ್ಲಿ, ಕೃತಿಯಲ್ಲಿ ಆಸಕ್ತಿ ಇರುವವನು. ನಾವೆಲ್ಲಾ ಆ ರೀತಿ ಒಂದಲ್ಲಾ ಒಂದು ಪುಸ್ತಕವನ್ನು ಕಳೆದುಕೊಂಡಿದ್ದೇವೆ. ಆದರೆ ಈ ಪುಸ್ತಕ ಕಳ್ಳ ಅದನ್ನು ಓದಲು, ಸಂಗ್ರಹಿಸಲು ಕದ್ದವನಲ್ಲ. ಅದು ಅಮೂಲ್ಯವಾದುದೆಂದೂ ಹಾಗೂ ಅದನ್ನು ಮಾರಾಟ ಮಾಡಿದರೆ ಹೆಚ್ಚು ಹಣ ಸಿಗುತ್ತದೆಂದು ಕದ್ದವನು.

ಆ ಕಳ್ಳ ಕದ್ದ ನಂತರ ಅದನ್ನು ಆನ್‌ಲೈನ್‌ನಲ್ಲಿ ಮಾರಾಟಕ್ಕಿಟ್ಟಿದ್ದನಂತೆ. ಅದನ್ನು ಗಮನಿಸಿದ ಊಟಿಯ ಗ್ರಂಥಪಾಲಕನಿಗೆ ಅದು ತನ್ನ ಗ್ರಂಥಾಲಯದಿಂದಲೇ ಕದ್ದ ಪುಸ್ತಕವೆಂಬುದು ತಿಳಿದು ಪೊಲೀಸರಿಗೆ ತಿಳಿಸಿ, ಆ ಕಳ್ಳನನ್ನು ಸೆರೆಹಿಡಿದಿದ್ದಾರೆ. ಅವನಿಗೆ ಯಾವ ಶಿಕ್ಷೆ ಕೊಟ್ಟರೋ ಗೊತ್ತಿಲ್ಲ.

ಇದಕ್ಕೆ ತದ್ವಿರುದ್ಧವಾದುದನ್ನು ಕೆಲವು ತಿಂಗಳ ಹಿಂದೆ ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಒಹಾಯ್ ನಗರದಲ್ಲಿ ಕಂಡೆ. ಅಲ್ಲಿನ 'ಬಾರ್ಟ್ಸ್ ಬುಕ್ಸ್' ಎನ್ನುವ ಪುಸ್ತಕದಂಗಡಿಗೆ ಹೋಗಿದ್ದೆ. ಆ ಅಂಗಡಿಯ ವಿಶೇಷವೆಂದರೆ, ಪುಸ್ತಕದಂಗಡಿಯ ಒಳಗಡೆ ಪುಸ್ತಕಗಳಿರುವಂತೆ ಸಾಲು ಸಾಲು ಪುಸ್ತಕದ ತೆರೆದ ಕಪಾಟುಗಳನ್ನು ರಸ್ತೆಯಲ್ಲಿ ಫುಟ್‌ಪಾತಿನಲ್ಲಿ ಅಂಗಡಿಯ ಸುತ್ತಲೂ ಇರಿಸಿದ್ದಾರೆ. ರಸ್ತೆಯಲ್ಲಿ ಓಡಾಡುವವರು ಹೊರಗೆ ಇರಿಸಿರುವ ಸಾವಿರಾರು ಪುಸ್ತಕಗಳ ಮೇಲೆ ಕಣ್ಣಾಡಿಸಿ, ತಮ್ಮ ಆಸಕ್ತಿಯ ಪುಸ್ತಕವಿದ್ದಲ್ಲಿ ಅಂಗಡಿಯೊಳಗೆ ಹೋಗಿ ಹಣ ಪಾವತಿಸಿ ಕೊಂಡೊಯ್ಯಬಹುದು.

ಅಂಗಡಿ ಮುಚ್ಚಿದ್ದಾಗ, ರಾತ್ರಿಯ ಹೊತ್ತು, ರಜೆ ದಿನಗಳಲ್ಲಿ ರಸ್ತೆಯಲ್ಲಿನ ಕಪಾಟುಗಳು ತೆರೆದೇ ಇರುತ್ತವೆ, ಯಾರೂ ಕಾವಲಿರುವುದಿಲ್ಲ. ಅಂಗಡಿ ಮುಂದೆ ಇರುವ ಬೋರ್ಡಿನಲ್ಲಿ 'ವಾರದ ಏಳೂ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6ವರೆಗೆ ಅಂಗಡಿ ತೆರೆದಿರುತ್ತದೆ ಹಾಗೂ ಅಂಗಡಿ ಮುಚ್ಚಿದ್ದಾಗ ಪುಸ್ತಕ ತೆಗೆದುಕೊಂಡವರು ಅದರ ಮೇಲೆ ನಮೂದಿಸಿರುವ ಹಣವನ್ನು ಬಾಗಿಲಿನ ಕಿಂಡಿಯಲ್ಲಿ ಹಾಕಿ ಹೋಗಿ' ಎಂದು ಬರೆದಿದ್ದಾರೆ. ನಾನು ಹೋದಾಗ ರಸ್ತೆಯಲ್ಲಿನ ಪುಸ್ತಕಗಳಲ್ಲಿ ನನ್ನ ಆಸಕ್ತಿಯ ಹಲವಾರು ಕೃತಿಗಳಿದ್ದವು. ಅವುಗಳಲ್ಲಿ ಸ್ಟೀಫನ್ ಜೆ ಗೌಲ್ಡ್ ಪುಸ್ತಕ ಹಾಗೂ ಇನ್ನು ಕೆಲವನ್ನು ಕೊಂಡು (ಅಂಗಡಿ ತೆರೆದಿತ್ತು) ಹಣ ಪಾವತಿಸಿ ತಂದೆ. ಆಗ ಒಂದರೆಕ್ಷಣ ಯೋಚಿಸಿದೆ, 'ಈ ರೀತಿಯ ಪುಸ್ತಕ ಮಾರಾಟ ನನ್ನ ದೇಶದಲ್ಲಿ ಸಾಧ್ಯವೆ?'

ಎಷ್ಟೋ ಜನ ಪುಸ್ತಕ ಎರವಲು ಪಡೆದು ಅವುಗಳನ್ನು ಹಿಂದಿರುಗಿಸದಿರುವುದು ಪುಸ್ತಕಪ್ರೇಮಿಗಳ ಅನುಭವಕ್ಕೆ ಬಂದಿರುತ್ತದೆ. ಕಾಲೇಜು ಮುಗಿಸಿ ಕೆಲಸಕ್ಕೆ ಸೇರಿದ ನಾನು ನನ್ನ ಒಂದು ದಿನದ ಸಂಬಳದ ಮೊತ್ತವನ್ನು ಪುಸ್ತಕಗಳಿಗಾಗಿ ಮೀಸಲಿರಿಸಿದ್ದೆ. ಯಾರಾದರೂ ಓದಲು ನನ್ನಿಂದ ಪುಸ್ತಕಗಳನ್ನು ಎರವಲು ಪಡೆದಾಗ ಅವರು ಓದಿದ ನಂತರ ಹಿಂದಿರುಗಿಸಲಿ ಎಂದು 'Books are one of my absolute essentials. Please return after reading. Do not fold page corners' ಎಂಬ ಸೀಲ್ ಮಾಡಿಸಿ ನನ್ನ ಪುಸ್ತಕಗಳ ಮೇಲೆ ಒತ್ತಿ ಹಾಕುತ್ತಿದ್ದೆ. ಕೆಲ ವರ್ಷಗಳ ನಂತರ ಆ ಸೂಚನೆ ತೀರಾ ಒರಟಾಯಿತೆನ್ನಿಸಿ ನಿಲ್ಲಿಸಿದೆ. ಈಗ ಓದಿರುವ, ಹಾಗೂ ಆಕರಕ್ಕೆ ಅವಶ್ಯಕವಿಲ್ಲವೆನ್ನಿಸುವ